# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

**ವಿಶೇಷ ರಾಜ್ಯ ಪತ್ರಿಕೆ**

| ಭಾಗ – ೩<br>Part – III | ಬೆಂಗಳೂರು, ಶನಿವಾರ, ೧೭, ಜನವರಿ, ೨೦೨೬(ಪುಷ್ಯ, ೨೭, ಶಕವರ್ಷ, ೧೯೪೭)<br>BENGALURU, SATURDAY, 17, JANUARY, 2026(PUSHYA , 27, SHAKAVARSHA, 1947) | ನಂ. ೬೯<br>No.69 |
|---|---|---|



**ಕರ್ನಾಟಕ ಸರ್ಕಾರ**

**ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗ**

**ನಂ.204, 2ನೇ ಮಹಡಿ, 3ನೇ ಗೇಟ್,**
**ಬಹುಮಹಡಿಗಳ ಕಟ್ಟಡ,**
**ಬೆಂಗಳೂರು-560001**


ಸಂಖ್ಯೆ: ಕಪಂರಾಸೀನಿಆ/65/ಪ್ರಾ.ಗ.ನಿ/2023 ದಿನಾಂಕ:17-01-2026

## <u>ಪ್ರಕಟಣೆ</u>

**ತುಮಕೂರು ಜಿಲ್ಲೆಯ ಕೊರಟಗೆರೆ ತಾಲ್ಲೂಕಿನ ತಾಲ್ಲೂಕು ಪಂಚಾಯಿತಿ ಚುನಾಯಿತ ಸದಸ್ಯರ ಸಂಖ್ಯೆ ನಿಗದಿ ಹಾಗೂ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಸೀಮಾ/ಗಡಿ ನಿರ್ಣಯ ಕುರಿತು.**

ನಗರಾಭಿವೃದ್ಧಿ ಇಲಾಖೆಯು, ತುಮಕೂರು ಜಿಲ್ಲೆಯ ಕೊರಟಗೆರೆ ತಾಲ್ಲೂಕಿನ ಕೆಲವು ಗ್ರಾಮೀಣ ಪ್ರದೇಶಗಳನ್ನು ನಗರ ಸಂಸ್ಥೆಗಳನ್ನಾಗಿ ಪರಿವರ್ತಿಸಿ ಅಧಿಸೂಚನೆಯನ್ನು ಹೊರಡಿಸಿರುತ್ತದೆ. ಈ ಹಿನ್ನೆಲೆಯಲ್ಲಿ, ಈಗಾಗಲೇ ದಿನಾಂಕ:16-12-2023ರಲ್ಲಿ ಅಧಿಸೂಚಿಸಿ ಹೊರಡಿಸಿರುವ ಕೊರಟಗೆರೆ ತಾಲ್ಲೂಕಿನ, ತಾಲ್ಲೂಕು ಪಂಚಾಯಿತಿ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ವ್ಯಾಪ್ತಿಯಿಂದ ಪರಿವರ್ತನೆಗೊಂಡಿರುವ ಗ್ರಾಮೀಣ ಪ್ರದೇಶಗಳನ್ನು ಕೈಬಿಡಬೇಕಾಗಿರುತ್ತದೆ. ಆದ್ದರಿಂದ, ಸರ್ಕಾರವು, ದಿನಾಂಕ:06-01-2026ರ ಕರ್ನಾಟಕ ರಾಜ್ಯ ಪತ್ರದಲ್ಲಿ ಕೊರಟಗೆರೆ ತಾಲ್ಲೂಕಿನ ಚುನಾಯಿತ ಸದಸ್ಯರ ಸಂಖ್ಯೆ ಹಾಗೂ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಸೀಮಾ/ಗಡಿ ನಿರ್ಣಯವನ್ನು ಹಿಂಪಡೆದಿರುತ್ತದೆ. ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗವು ಕೊರಟಗೆರೆ ತಾಲ್ಲೂಕಿನ ಪರಿಷ್ಕೃತ ಸದಸ್ಯರ ಸಂಖ್ಯೆಯನ್ನು ಹಾಗೂ ಸೀಮಾ/ಗಡಿಗಳನ್ನು ನಿಯಮಾನುಸಾರ ರಚಿಸಬೇಕಾಗಿರುತ್ತದೆ.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 121, 122 ಮತ್ತು 124 ರನ್ವಯ ಹಾಗೂ 308(ಎಫ್) ರ ಪ್ರಕರಣದಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗವು ತುಮಕೂರು ಜಿಲ್ಲೆಯ ಕೊರಟಗೆರೆ ತಾಲ್ಲೂಕಿನ ತಾಲ್ಲೂಕು ಪಂಚಾಯತಿ ಚುನಾಯಿತ ಸದಸ್ಯರ ಸಂಖ್ಯೆಯನ್ನು ಕೋಷ್ಠಕ **'ಅ'** ದಲ್ಲಿರುವಂತೆ ನಿಗದಿಪಡಿಸಿದೆ. **'ಅ'** ಕೋಷ್ಠಕದ 2ನೇ ಅಂಕಣದಲ್ಲಿರುವ ತಾಲ್ಲೂಕಿನಿಂದ ಆಯ್ಕೆಯಾಗುವ ತಾಲ್ಲೂಕು ಪಂಚಾಯತಿ ಚುನಾಯಿತ ಸದಸ್ಯರ ಸಂಖ್ಯೆಯನ್ನು 3ನೇ ಅಂಕಣದಲ್ಲಿ ನಿಗದಿಪಡಿಸಿದೆ.

ತುಮಕೂರು ಜಿಲ್ಲೆಯ ಕೊರಟಗೆರೆ ತಾಲ್ಲೂಕಿನ ತಾಲ್ಲೂಕು ಪಂಚಾಯತಿ ವ್ಯಾಪ್ತಿಯೊಳಗಿರುವ ಪ್ರದೇಶಗಳನ್ನು **15** ಏಕ ಸದಸ್ಯ ತಾಲ್ಲೂಕು ಪಂಚಾಯಿತಿ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳನ್ನಾಗಿ ವಿಂಗಡಿಸಿ ಅವುಗಳ ಸೀಮಾ/ಗಡಿಯನ್ನು ಕೋಷ್ಠಕ **'ಆ'** ದಲ್ಲಿರುವಂತೆ ನಿರ್ಣಯಿಸಿದೆ. **'ಆ'** ಕೋಷ್ಟಕದ 2 ನೇ ಅಂಕಣದಲ್ಲಿ ಪ್ರತಿಯೊಂದು

ತಾಲ್ಲೂಕು ಪಂಚಾಯತಿಯ ಪ್ರಾದೇಶಿಕ ಚುನಾವಣಾ ಕ್ಷೇತ್ರದ ಸಂಖ್ಯೆ ಹಾಗೂ ಹೆಸರನ್ನು ಮತ್ತು ಕೋಷ್ಟಕದ 3 ನೇ ಅಂಕಣದಲ್ಲಿ ನಮೂದಿಸಿರುವ ಗ್ರಾಮಗಳನ್ನೊಳಗೊಂಡ ಪ್ರದೇಶವನ್ನು ಆ ಪ್ರಾದೇಶಿಕ ಚುನಾವಣಾ ಕ್ಷೇತ್ರದ ವ್ಯಾಪ್ತಿಯೆಂದು ನಿಗದಿಪಡಿಸಿದೆ.

ತುಮಕೂರು ಜಿಲ್ಲೆಯ ಕೊರಟಗೆರೆ ತಾಲ್ಲೂಕಿನ ತಾಲ್ಲೂಕು ಪಂಚಾಯತಿ ಚುನಾಯಿತ ಸದಸ್ಯರ ಸಂಖ್ಯೆ ಹಾಗೂ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ವ್ಯಾಪ್ತಿಗೆ ಸಂಬಂಧಿಸಿದಂತೆ ಆಕ್ಷೇಪಣೆಗಳಿದ್ದಲ್ಲಿ, ಪ್ರಕಟಣೆಯ ದಿನಾಂಕದಿಂದ 7 (ಏಳು) ದಿವಸಗಳ ಒಳಗಾಗಿ **ಅಂದರೆ ದಿನಾಂಕ:23-01-2026 ಸಂಜೆ 5.00 ಗಂಟೆಯ ಒಳಗೆ** ಸಲ್ಲಿಸಲು ತಿಳಿಸಿದೆ. ಆಕ್ಷೇಪಣೆಗಳನ್ನು ಆನ್‌ಲೈನ್ ಮೂಲಕ ಹಾಗೂ ಖುದ್ದಾಗಿ/ಅಂಚೆಯ ಮೂಲಕ ಈ ಕೆಳಕಂಡ ವಿಳಾಸಕ್ಕೆ ಸಲ್ಲಿಸತಕ್ಕದ್ದು. ಅಂಚೆಯ ಮೂಲಕ ಸಲ್ಲಿಸಿದಾಗಲೂ, ಆಯೋಗವು ನಮೂದಿಸಿದ ದಿನಾಂಕದೊಳಗೆ ಸಲ್ಲಿಸತಕ್ಕದ್ದು. ನಂತರ ಸ್ವೀಕೃತವಾದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಹಾಗೂ ಅಂಚೆ ಇಲಾಖೆಯ ವಿಳಂಬಕ್ಕೆ ಆಯೋಗವು ಜವಾಬ್ದಾರರಾಗಿರುವುದಿಲ್ಲ ಎಂದು ಈ ಮೂಲಕ ತಿಳಿಸಿದೆ.

**(ಅ) ಆನ್ ಲೈನ್ ಮೂಲಕ:**

**ವೆಬ್ ಸೈಟ್ ವಿಳಾಸ: "https://rdpr.karnataka.gov.in/rdc/public/"** ಸದರಿ ವೆಬ್‌ಸೈಟ್‌ನ ಮುಖಪುಟದ ಎಡಭಾಗದಲ್ಲಿರುವ ಸಾರ್ವಜನಿಕ ಸಲಹೆಗಳು ಎಂಬ ಶೀರ್ಷಿಕೆಯನ್ನು CLICK ಮಾಡಿ ತಮ್ಮ ಆಕ್ಷೇಪಣೆಗಳನ್ನು ಆನ್‌ಲೈನ್ ನಲ್ಲಿ ಸಲ್ಲಿಸಬಹುದು.

**(ಆ) ಖುದ್ದಾಗಿ/ಅಂಚೆ ಮೂಲಕ:**

ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗ.<br>
3ನೇ ಗೇಟ್, 2ನೇ ಮಹಡಿ, ಕೊಠಡಿ ಸಂಖ್ಯೆ: 222/A, ಬಹುಮಹಡಿ ಕಟ್ಟಡ,<br>
ಅಂಬೇಡ್ಕರ್ ವೀಧಿ, ಬೆಂಗಳೂರು-560001

**ಕೋಷ್ಟಕ 'ಅ'**

| ತುಮಕೂರು ಜಿಲ್ಲೆ | | |
|---|---|---|
| ಕ್ರ. ಸಂ. | ತಾಲ್ಲೂಕು ಪಂಚಾಯತಿಯ ಹೆಸರು | ತಾಲ್ಲೂಕು ಪಂಚಾಯತಿಯ ಸದಸ್ಯರ ಸಂಖ್ಯೆ |
| 1 | 2 | 3 |
| | ಕೊರಟಗೆರೆ | 15 |

**ಕೋಷ್ಟಕ 'ಆ'**

| ತುಮಕೂರು ಜಿಲ್ಲೆ | | |
|---|---|---|
| ಕ್ರ ಸಂ | ತಾಲ್ಲೂಕು ಪಂಚಾಯತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ಸಂಖ್ಯೆ ಮತ್ತು ಹೆಸರು | ತಾಲ್ಲೂಕು ಪಂಚಾಯತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಗ್ರಾಮಗಳ ಹೆಸರು |
| 1 | 2 | 3 |
| ಕೊರಟಗೆರೆ ತಾಲ್ಲೂಕು ಪಂಚಾಯಿತಿ | | |
| 1 | 1-ತೋವಿನಕೆರೆ | ತೋವಿನಕೆರೆ,ಗೊಲ್ಲರಹಟ್ಟಿ(ಮ) ಮುದಿಗೌಡನಹಳ್ಳಿ, ಬಡಮುದ್ದನಪಾಳ್ಯ, ಬೋರಯ್ಯನಹಟ್ಟಿ(ಗೊಲ್ಲರಹಟ್ಟಿ)(ಮ) ದೊಡ್ಡಸಂಜೀವೆಗೌಡನಪಾಳ್ಯ ,ಚಿಕ್ಕಸಂಜೀವೆಗೌಡನಪಾಳ್ಯ, ಬಿಸಾಡಿಹಳ್ಳಿ, ಗೊಲ್ಲರಟ್ಟಿ (ಮ)ಉಗ್ರನಹಳ್ಳಿ(ಬೇ) ಕಣಿವೆ ಹೊಸಹಳ್ಳಿ, ದೊಡ್ಡೇಗೌಡನ ಪಾಳ್ಯ, ಅಜ್ಜೇನಹಳ್ಳಿ, ಗೊಲ್ಲರಹಟ್ಟಿ(ಮ) ಕುರಿಹಳ್ಳಿ, ಬೋರಪ್ಪನಹಟ್ಟಿ(ಮ) ಸೂರೇನಹಳ್ಳಿ, ಚಿಕ್ಕವೆಂಕಟದಾಸೇಗೌಡನ ಪಾಳ್ಯ(ಮ) ಕಲ್ಲುವೀರನಹಟ್ಟಿ(ಮ) ಚಿಕ್ಕಣ್ಣನಹಳ್ಳಿ, ಮರಾಠಿಗರಪಾಳ್ಯ (ಮ) ಚಿಕ್ಕರಸನಹಳ್ಳಿ, ಗೊಲ್ಲರಹಟ್ಟಿ(ಮ), ದೇವರಹಳ್ಳಿ, ಕಬ್ಬಿಗೆರೆ, ಗೊಲ್ಲರಹಟ್ಟಿ(ಮ) ವೆಂಕಟರಮಣನಹಳ್ಳಿ, ಓಬನಹಳ್ಳಿ. |

| ತುಮಕೂರು ಜಿಲ್ಲೆ | | |
|---|---|---|
| ಕ್ರ ಸಂ | ತಾಲ್ಲೂಕು ಪಂಚಾಯತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ಸಂಖ್ಯೆ ಮತ್ತು ಹೆಸರು | ತಾಲ್ಲೂಕು ಪಂಚಾಯತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಗ್ರಾಮಗಳ ಹೆಸರು |
| 1 | 2 | 3 |
| **2** | 2-ಬೂದಗವಿ | ಬೂದಗವಿ (ಸಿದ್ದರಬೆಟ್ಟ) (ಮ) ಮರೇನಾಯಕನಹಳ್ಳಿ, ಘಟ್ಟಿತಿಮ್ಮನಹಳ್ಳಿ, ನೇಗಲಾಲ, ನೇಗಲಾಲ ಮಜರಾ ಮಾರೀಪಾಳ್ಯ (ಮ), ನೇಗಲಾಲ ಮಜರಾ ಅನುಪಲು (ಮ) ಬೆಂಡೋಣೆ ಗೌಜಗಲ್ಲು ಮಲ್ಲೇಕಾವು ಗೌರಿಕಲ್ಲು ದೊಗ್ಗನಹಳ್ಳಿ ಚನ್ನರಾಯನದುರ್ಗ ಹಂಚಿಮಲ್ಲನಹಳ್ಳಿ ದೊಡ್ಡತಿಮ್ಮನಹಳ್ಳಿ(ಬೇ) ಕುಮಟೇನಹಳ್ಳಿ, ಜುಂಜರಾಮನಹಳ್ಳಿ ಜೋನಿಗರಹಳ್ಳಿ. |
| **3** | 3-ತುಂಬಾಡಿ | ತುಂಬಾಡಿ, ಬೈರೇನಹಳ್ಳಿ(ಬೇ) ,ಬಿರದೇನಹಳ್ಳಿ, ಟಿ ಗೊಲ್ಲಹಳ್ಳಿ, ಸುಣ್ಣಕಲ್ಲರಪಾಳ್ಯ (ಮ) ಪೆಮ್ಮೆದೇವರಹಳ್ಳಿ,ಲಂಬಾಣಿತಾಂಡ (ಮ), ಟಿ ಗೊಲ್ಲಹಳ್ಳಿ ಮಜರೆ ಪಕೀರಪ್ಪನ ಪಾಳ್ಯ (ಮ), ಟಿ ಗೊಲ್ಲಹಳ್ಳಿ ಕೆಳಗಲ ಲಂಬಾಣಿ ತಾಂಡ (ಮ), ಟಿ ಗೊಲ್ಲಹಳ್ಳಿ ಮೇಗಲ ಲಂಬಾಣಿ ತಾಂಡ (ಮ), ಕಂಬದಹಳ್ಳಿ, ಮುಗ್ಗೊಂಡನಹಳ್ಳಿ, ಮುಸುವಿನಕಲ್ಲು (ಬೇ), ದಾಸರಹಳ್ಳಿ,ಪುಟ್ಟಮನಪಾಳ್ಯ(ಮ), ಆಶ್ರಮ ತಾಂಡ(ಮ), ಲಂಬಾಣಿತಾಂಡ (ಮ) ಕುರುಡುಗೋನಹಳ್ಳಿ, ಎತ್ತುಗೋನಹಳ್ಳಿ, ಜನತಾ ಕಾಲೋನಿ (ಮ),ಕಲ್ಕೆರೆ, ಕಲ್ಕೆರೆ ಮಜರೆ ರಂಗನಹಳ್ಳಿ , ಕಲ್ಕೆರೆ ಮಜರೆ ಗೂಬಲಗುಟ್ಟೆ, ಕಲ್ಕೆರೆ ಮಜರೆ ಬಾಲೆನಹಳ್ಳಿ, ಭಕ್ತರಹಳ್ಳಿ, ಬುರುಗನಹಳ್ಳಿ, ಮಲಪನಹಳ್ಳಿ, ಲಂಬಾಣಿತಾಂಡ (ಮ), ಬಂದೇಹಳ್ಳಿ(ಮ), ವಡ್ಡಗೆರೆ, ಲಂಬಾಣಿತಾಂಡ (ಮ) ಚೀಲಗೊಂಡನಹಳ್ಳಿ, ಯಾದಗೆರೆ (ಮ) ಮಹಂತಗೋನಹಳ್ಳಿ (ಬೇ), ರಂಗನಹಳ್ಳಿ(ಬೇ) ಗರಗದೊಡ್ಡಿ. |
| **4** | 4-ಅಕ್ಕಿರಾಂಪುರ | ಅಕ್ಕಿರಾಂಪುರ, ಅಕ್ಕಿರಾಂಪುರ ಮಜರೆ ಹೊಸಹಳ್ಳಿ, ಕಾದಿಲಾಪುರ (ಮ) ಭದ್ರಯ್ಯನಪಾಳ್ಯ(ಮ) ಕತ್ತಿನಾಗೇನಹಳ್ಳಿ, ಆರ್ ವೆಂಕಟಾಪುರ, ಸೋಂಪುರ ಕ್ಯಾಶವಾರ, ರೆಡ್ಡಿಹಳ್ಳಿ, ಬಸವನಹಳ್ಳಿ (ಮ), ಗೌರಗಾನಹಳ್ಳಿ, ಗೊಲ್ಲರಹಟ್ಟಿ(ಮ). |
| **5** | 5-ಬೈಚಾಪುರ | ಬೈಚಾಪುರ, ರಾಯವಾರ, ಹೊಳೆ ವೆಂಕಟಾಪುರ (ಮ) ಚಿಕ್ಕನಹಳ್ಳಿಬುಡ್ಡೇನಹಳ್ಳಿ, ಗೊಲ್ಲರಹಟ್ಟಿ(ಮ), ಚಿಕ್ಕನಹಳ್ಳಿ ಮಜರೆ ಗೊಲ್ಲರಹಟ್ಟಿ(ಮ) ಗೊಡ್ರಹಳ್ಳಿ, ಭಕ್ತರಹಳ್ಳಿ, ಅರಸಾಪುರ-1, ಲಂಬಾಣಿತಾಂಡ (ಮ) ,ಅಗ್ರಹಾರ, ಲಂಬಾಣಿತಾಂಡ (ಮ), ಅರಸಾಪುರ ಮಜರೆ ಹೊಸಪಾಳ್ಯ,, ಬೈರೇನಹಳ್ಳಿ, ಕಳ್ಳಿಪಾಳ್ಯ (ಮ). |
| **6** | 6-ಬೊಮ್ಮಲದೇವಿಪುರ | ಬೊಮ್ಮಲದೇವಿಪುರ, ಚಟ್ಟೇಪಲ್ಲಿ ಪಾಳ್ಯ (ಮ), ಕರಿಚಿಕ್ಕನಹಳ್ಳಿ(ಮ), ಮಲ್ಲಯ್ಯನಪಾಳ್ಯ(ಮ), ಲಿಂಗದವೀರನಹಳ್ಳಿ, ತಿಗಳರಪಾಳ್ಯ (ಮ) ಕದರಯ್ಯನಪಾಳ್ಯ(ಮ), ಅವಲಯ್ಯನಪಾಳ್ಯ (ಮ)ಬ್ಯಾಡರಹಳ್ಳಿ, ಚಟ್ಟೇನಹಳ್ಳಿ, ಅಕ್ಕಾಜಿಹಳ್ಳಿ, ಹೊಸಪಾಳ್ಯ(ಮ),ಚಿಕ್ಕಪಾಳ್ಯ(ಮ) ದೊಡ್ಡಪಾಳ್ಯ (ಮ) ಅವುದಾರನಹಳ್ಳಿ, ಬಿಳೇಕಳ್ಳಹಳ್ಳಿ(ಮ), ಮುದ್ದನಹಳ್ಳಿ, ಗಂಗೇನಹಳ್ಳಿ, ಚುಂಚೇನಹಳ್ಳಿ, ಮಾದೇನಹಳ್ಳಿ,ಗಿಡಚಿಕ್ಕನಹಳ್ಳಿ(ಮ), ಲಂಬಾಣಿತಾಂಡ (ಮ) ಕಾಶಾಪುರ, ಸಿದ್ದಲಿಂಗನಪಾಳ್ಯ(ಮ) ರಾಣೋಜಿಪಾಳ್ಯ (ಮ) ಹಕ್ಕಿ-ಪಿಕ್ಕಿ ಕಾಲೋನಿ(ಮ), ಲಲಿತಕಾಲೋನಿ(ಮ), ಬೊಮ್ಮಲದೇವಿಪುರ, ಚಟ್ಟೇಪಲ್ಲಿ ಪಾಳ್ಯ (ಮ), ಕರಿಚಿಕ್ಕನಹಳ್ಳಿ(ಮ), ಮಲ್ಲಯ್ಯನಪಾಳ್ಯ(ಮ), ಲಿಂಗದವೀರನಹಳ್ಳಿ, ತಿಗಳರಪಾಳ್ಯ (ಮ) ಕದರಯ್ಯನಪಾಳ್ಯ(ಮ), ಅವಲಯ್ಯನಪಾಳ್ಯ (ಮ)ಬ್ಯಾಡರಹಳ್ಳಿ, ಚಟ್ಟೇನಹಳ್ಳಿ, ಅಕ್ಕಾಜಿಹಳ್ಳಿ, ಹೊಸಪಾಳ್ಯ(ಮ),ಚಿಕ್ಕಪಾಳ್ಯ(ಮ) ದೊಡ್ಡಪಾಳ್ಯ (ಮ) ಅವುದಾರನಹಳ್ಳಿ, ,ಬಿಳೇಕಳ್ಳಹಳ್ಳಿ(ಮ), ಮುದ್ದನಹಳ್ಳಿ, ಗಂಗೇನಹಳ್ಳಿ, ಚುಂಚೇನಹಳ್ಳಿ, ಮಾದೇನಹಳ್ಳಿ,ಗಿಡಚಿಕ್ಕನಹಳ್ಳಿ(ಮ) ಲಂಬಾಣಿತಾಂಡ (ಮ) ಕಾಶಾಪುರ, ಸಿದ್ದಲಿಂಗನಪಾಳ್ಯ(ಮ) ರಾಣೋಜಿಪಾಳ್ಯ (ಮ) ಹಕ್ಕಿ-ಪಿಕ್ಕಿ ಕಾಲೋನಿ(ಮ), ಲಲಿತಕಾಲೋನಿ(ಮ). |

| ತುಮಕೂರು ಜಿಲ್ಲೆ | | |
|---|---|---|
| ಕ್ರ ಸಂ | ತಾಲ್ಲೂಕು ಪಂಚಾಯತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ಸಂಖ್ಯೆ ಮತ್ತು ಹೆಸರು | ತಾಲ್ಲೂಕು ಪಂಚಾಯತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಗ್ರಾಮಗಳ ಹೆಸರು |
| 1 | 2 | 3 |
| **7** | 7-ಹೊಳವನಹಳ್ಳಿ | ಹೊಳವನಹಳ್ಳಿ, ಕರಕಲಘಟ್ಟ, (ಮ) ದುಗ್ಗೇನಹಳ್ಳಿ, ಹರಪ್ಪಗೊಂಡನಹಳ್ಳಿ, ಕುರುಬರಹಳ್ಳಿ, ತೊಗರಿಘಟ್ಟ,ಪಣ್ಣೇನಹಳ್ಳಿ, ಹನುಮೇನಹಳ್ಳಿ. |
| **8** | 8-ಬುಕ್ಕಪಟ್ಟಣ | ಬುಕ್ಕಪಟ್ಟಣ, ಬುಕ್ಕಪಟ್ಟಣ ಮಜರೆ ಗೊಲ್ಲರಹಟ್ಟಿ, ಮೇಗಲಹಟ್ಟಿ(ಮಾರುತಿ ನಗರ) (ಮ), ಕೆಳಗಲಹಟ್ಟಿ(ಶ್ರೀನಿವಾಸಪುರ) (ಮ), ಹೊಸಪಾಳ್ಯ(ಮ), ಗೊಂದಿಹಳ್ಳಿ, ಹರಿಜನಕಾಲೋನಿ(ಪ್ಲಾಂಟೇಷನ್)(ಮ), ಸೀಗಿರನಹಟ್ಟಿ(ಮ) ,ವೀರೋಬನಹಳ್ಳಿ, ಬರಕ, ಜಗನ್ನಾಥಪುರ, ನವಿಲು ಕುರಿಕೆ,ದಮಗಲಯ್ಯನಪಾಳ್ಯ (ಮ) ಜನತಾ ಕಾಲೋನಿ (ಮ) , ಥರಟಿ,ಅಜ್ಜಿಹಳ್ಳಿ (ಮ) ಭೋವಿಕಾಲೋನಿ(ಮ), ಚನ್ನಪಟ್ಟಣ, ದೊಡ್ಡನರಸಯ್ಯನಪಾಳ್ಯ (ಮ), ತಿಗಳರಪಾಳ್ಯ (ಮ) ,ಕುರಿತಿಮ್ಮನಹಳ್ಳಿ (ಮ), ಕಲ್ಲುಮನೆ ತೋಟ(ಮ), ಗೊಲ್ಲದೇವರಹಳ್ಳಿ, ಕಂಬದಹಳ್ಳಿ, ಗೊಲ್ಲರಹಟ್ಟಿ(ಮ). |
| **9** | 9-ಮಣುವಿನಕುರಿಕೆ | ಕುರಂಕೋಟೆ, ,ಬಂಡೇನಹಳ್ಳಿ (ಮ),ಬೊರಯ್ಯನಹಟ್ಟಿ (ಗೊಲ್ಲರಹಟ್ಟಿ)(ಮ) ಕುರುಬರಹಳ್ಳಿ, ಗೊಲ್ಲರಹಟ್ಟಿ(ಮ) ,ಶಂಭೋನಹಳ್ಳಿ, ಬಿಕ್ಕೇಗುಟ್ಟೆ(ಮ), ದಾಸಲುಕುಂಟೆ, ಹೊಲತಾಳು, ಹೊಲತಾಳು ಪಾಳ್ಯ (ಮ) ಮಣುವಿನಕುರಿಕೆ, ಗೊಂದಿಹಳ್ಳಿ ಬರಕ ವೀರೋಬನಹಳ್ಳಿ ವೆಂಕಣನಹಳ್ಳಿ, ಗಟ್ಲಗೊಲ್ಲಹಳ್ಳಿ, ಹರೇಜೇನಹಳ್ಳಿ, ಮಹಲಿಂಗನಹಟ್ಟಿ (ಮ) ಗಟ್ಲಹಳ್ಳಿ, ಗಾಂಧಿನಗರ (ಮ). |
| **10** | 10-ನೀಲಗೊಂಡನಹಳ್ಳಿ | ನೀಲಗೊಂಡನಹಳ್ಳಿ, ಇರಕ ಸಂದ್ರ ಕಾಲೋನಿ (ಮ) ಮಣ್ಣೂರು ತಿಮ್ಮನಹಳ್ಳಿ, ಹನುಮಂತಪುರ (ಮ), ಹೊನ್ನೇನಹಳ್ಳಿ, ಸಂಕೇನಹಳ್ಳಿ, ಗೊಲ್ಲರಹಟ್ಟಿ(ಮ) ದೊಡ್ಡಪಾಲನಹಳ್ಳಿ, ಹೊಸಹಳ್ಳಿ (ಮ) ಚಿಕ್ಕಪಾಲನಹಳ್ಳಿ, ದೊಡ್ಡಪಾಲನಹಳ್ಳಿ ಮಜರೆ ಸೀಗೇಪಾಳ್ಯ ,ಹೊಸಕೋಟೆ, ಎ ವೆಂಕಟಾಪುರ, ಅಳಾಲಸಂದ್ರ (ಮ), ಕರೇಕಲ್ಲು(ಮ). |
| **11** | 11-ಕ್ಯಾಮೇನಹಳ್ಳಿ | ಕ್ಯಾಮೇನಹಳ್ಳಿ, ಕ್ಯಾಮೇನಹಳ್ಳಿ ದೇವಸ್ಥಾನ, ಹೊಸಹಳ್ಳಿ, ಬಿದಲೋಟಿ, ಶಾಂತಲಿಂಗಯ್ಯನಪಾಳ್ಯ(ಮ), ಕೋಡ್ಲಹಳ್ಳಿ, ಹುಚ್ಚವೀರಯ್ಯನಪಾಳ್ಯ(ಮ) ವಿರಯ್ಯನಪಾಳ್ಯ(ಮ) ಹೊನ್ನಾರನಹಳ್ಳಿ, ರಾಜಯ್ಯನಪಾಳ್ಯ(ಮ), ಚಿಕ್ಕಾವಳ್ಳಿ, ಚಿಂಪುಗೋನಹಳ್ಳಿ (ಮ) ಹರಿಜನಕಾಲೋನಿ(ಮ) ಬುಡಮಾರನಹಳ್ಳಿ, ಶಕುನಿತಿಮ್ಮನಹಳ್ಳಿ, ಕಳ್ಳಿಪಾಳ್ಯ(ಮ), ಲಂಬಾಣಿ ತಾಂಡ (ಮ), ಸಿರಿಗೋನಹಳ್ಳಿ, ಲಂಬಾಣಿ ತಾಂಡ (ಮ), ಹುಲುಗೋನಹಳ್ಳಿ, ಗಂಟಿಗಾನಹಳ್ಳಿ, ಕುರುಬರ ಗಂಟಿಗಾನಹಳ್ಳಿ (ಮ) ಸೊಣ್ಣೇನಹಳ್ಳಿ ಮಾಳೇನಹಳ್ಳಿ, ಹಂಚಿಹಳ್ಳಿ, ಮುದ್ದರಂಗಯ್ಯನಪಾಳ್ಯ(ಮ) , ಮಲ್ಲೇಶಪುರ, ಕೊಂಗೇನಹಳ್ಳಿ, ಬೋಡಬಂಡೇನಹಳ್ಳಿ, ದಿನ್ನೇಪಾಳ್ಯ(ಮ) ಸದೊಡ್ಡಮಲ್ಲಯ್ಯನಪಾಳ್ಯ(ಮ) ಕಾಡುದಾಸಯ್ಯನಪಾಳ್ಯ (ಮ) ಬಜ್ಜನಹಳ್ಳಿ, ಚೌಳಕುಂಟೆ(ಮ),ತಣ್ಣೇನಹಳ್ಳಿ, ಜಿ ನಾಗೇನಹಳ್ಳಿ, ಜಿ ಎನ್ ಗೊಲ್ಲರಹಟ್ಟಿ(ಮ) ದೊಡ್ಡೇನಹಳ್ಳಿ (ಬೇ)ಕೆರೆಯಾಗಲಹಳ್ಳಿ, ವೀರಾಪುರ, ಕೆಂಗನಪಾಳ್ಯ, ಗುಂಡ್ಲಹಳ್ಳಿ(ಮ), ಮೆಳೆಹಳ್ಳಿ, ತುಂಬುಗೋನಹಳ್ಳಿ, ತಿಮ್ಮನಹಳ್ಳಿ, ಮಾದವಾರ, ಗೊರವನಹಳ್ಳಿ, ತೀತಾ-1, ಪ್ರಾಜೆಕ್ಟ್ ಕಾಲೋನಿ (ಮ) ನರಸಯ್ಯನಪಾಳ್ಯ(ಮ), ಗೊಲ್ಲರಹಟ್ಟಿ(ಮ), ಗಡ್ಡೋಬನಹಳ್ಳಿ, ಕಂಬದಹಳ್ಳಿ, ಟಿ. ವೆಂಕಟಾಪುರ. |
| **12** | 12-ದೊಡ್ಡಸಾಗ್ಗೆರೆ | ಡೊಡ್ಡಸಾಗ್ಗರೆ,ಗಜಮುದ್ದನಹಳ್ಳಿ(ಮ) ಚೀಲೇನಹಳ್ಳಿ, ಪೋಲೇನಹಳ್ಳಿ, ಚಿಕ್ಕಸಾಗ್ಗರೆ, ಸಂಜೀವನಗರ, ಎಂಗೊಲ್ಲಹಳ್ಳಿ, ಎಂ ಬೇವಿನಹಳ್ಳಿ, ಎಂ ಹೊಸಹಳ್ಳಿ, ಉಪಾಸಪುರ, ಮಡಿವಾಳಪಾಳ್ಯ(ಮ) ಅಲಪನಹಳ್ಳಿ, ಲಂಕೇನಹಳ್ಳಿ, ಎಂ ಅಗ್ರಹಾರ, ಓಬಳದೇವರಹಳ್ಳಿ, ಭಕ್ತರಹಳ್ಳಿ,, ಮಾವತ್ತೂರು, ಸಿಂಗಳೀಕಪುರ, ಶ್ರೀರಾಮನಹಳ್ಳಿ, ಹುರುಳುಗೆರೆ, ಚನ್ನವಡೇರಹಳ್ಳಿ, ಮಿಣಸಂದ್ರ, ಲಿಂಗಾಪುರ, ಮದ್ಯವೆಂಕಟಾಪುರ,ನಾಗರಹಳ್ಳಿ ಮಜರೆ, ಬಂದ್ರೆಹಳ್ಳಿ ಮಜರೆ. |

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



| ತುಮಕೂರು ಜಿಲ್ಲೆ | | |
|---|---|---|
| ಕ್ರ ಸಂ | ತಾಲ್ಲೂಕು ಪಂಚಾಯತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ಸಂಖ್ಯೆ ಮತ್ತು ಹೆಸರು | ತಾಲ್ಲೂಕು ಪಂಚಾಯತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಗ್ರಾಮಗಳ ಹೆಸರು |
| 1 | 2 | 3 |
| **13** | 13-ಪಾತಗಾನಹಳ್ಳಿ | ಪಾತಗಾನಹಳ್ಳಿ, ಕ್ಯಾತಗಾನಹಳ್ಳಿ(ಮ), ಗಿಡ್ಡಯ್ಯನಪಾಳ್ಯ(ಮ), ಮೂಡಲಪಾಳ್ಯ(ಮ), ಗೊಲ್ಲರಹಟ್ಟಿ(ಮ) ,ಸಿಂಗನಪಾಳ್ಯ(ಮ), ಬೈರಸಂದ್ರ(ಮ), ರಾಯಪುರ(ಬೆ), ತಿಗಳರಹಳ್ಳಿ(ಬೇ), ವೆಂಗಳಮ್ಮನಹಳ್ಳಿ, ಪುಟ್ಟಸಂದ್ರ, ತಾರೇಹಳ್ಳಿ(ಮ), ಹರಿಜನಕಾಲೋನಿ (ಮ) ಕುರುಬರಪಾಳ್ಯ(ಮ), ಪಟ್ಟದೇವರಪಾಳ್ಯ(ಮ) ಹೊಸಹಳ್ಳಿ(ಮ), ಜುನ್ನಹಳ್ಳಿ(ಮ), ಮುದ್ರೆಗೊಂಡನಪಾಳ್ಯ (ಮ), ಕಾಳಗಾನಹಳ್ಳಿ(ಮ) ಬೈರಸಂದ್ರ (ಮ), ಮೊಟಗೊಂಡನಹಳ್ಳಿ, ವೀರಸಾಗರ, ರಾಯಾಪುರ, ವಜ್ಜನಕುರಿಕೆ,ನಾಗಮ್ಮನಪಾಳ್ಯ(ಮ),ಸಮೊರಗಾನಹಳ್ಳಿ, ಬ್ಯಾಡರ ಅಗ್ರಹಾರ, ಕೆ ಜಿ ಬೇವಿನಹಳ್ಳಿ, ದಿನ್ನೇಪಾಳ್ಯ(ಮ), ಕೆಜಿ ಬೇವಿನಹಳ್ಳಿ ಮಜರೆ ಗುಡಿ ಬೇವಿನಹಳ್ಳಿ, ಹರಪ್ಪನಹಳ್ಳಿ, ದುಡ್ಡನಹಳ್ಳಿ, ಮಾರಗೊಂಡನಗುಣಿ, ನಾಯಕನಪಾಳ್ಯ(ಮ) ಮರಚರಹಳ್ಳಿ, ಪುಟ್ಟನರಸಮ್ಮನಪಾಳ್ಯ(ಮ). |
| **14** | 14-ಎಲೆರಾಂಪುರ | ಎಲೆರಾಂಪುರ,ಗೊಲ್ಲರಟ್ಟಿ(ಮ), ಇರಕಸಂದ್ರ, ಮೂಡ್ಲಕೆರೆ ಪಾಳ್ಯ, ಸಿಂಗ್ರಿಹಳ್ಳಿ, ಎಸ್ ಗೊಲ್ಲಹಳ್ಳಿ, ಚಿಕ್ಕದೊಡ್ಡವಾಡಿ, ಕರಿದುಗ್ಗನಹಳ್ಳಿ, ಬೈಚೇನಹಳ್ಳಿ, ಡಿ ನಾಗೇನಹಳ್ಳಿ, ಸಿದ್ದಾಪುರ, ತಂಗನಹಳ್ಳಿ, ವಡ್ಡರಹಳ್ಳಿ, ಹುಲುವಂಗಲ, ಗುಟ್ಟೇಕೆಂಪನ ಪಾಳ್ಯ(ಮ) ಬಂಡೇಪಾಳ್ಯ(ಮ) ಜತಾಕಾಲೋನಿ(ಮ), ರಾವುತನಹಳ್ಳಿ, ತಿಗಳರಪಾಳ್ಯ(ಮ) ತಿಮ್ಮನಾಯಕನಹಳ್ಳಿ, ಕರೇಗೌಡನಪಾಳ್ಯ(ಮ) ತಿಮ್ಮಸಂದ್ರ, ಹೊಸಕೋಟೆ (ಮ) ಪುರದಹಳ್ಳಿ, ಲಕ್ಕಯ್ಯನಪಾಳ್ಯ,ದಾಸಯ್ಯನಪಾಳ್ಯ(ಮ). |
| **15** | 15-ಕೋಳಾಲ | ಕೋಳಾಲ, ಹರಿಜನಕಾಲೋನಿ(ಮ), ಕರೇಹನುಮಯ್ಯನಪಾಳ್ಯ(ಮ), ನರಸಾಪುರ, ಕಾಟೇನಹಳ್ಳಿ, ಯಲಚಗೆರೆ,ಗೋಣಿಹಳ್ಳಿ(ಮ), ಮಲುಗೋನಹಳ್ಳಿ, ಬಿದರಗುಟ್ಟೆ(ಮ), ರಂಗಾಪುರ, ಮಾಧೂರಯ್ಯನಪಾಳ್ಯ(ಮ), ಕರೇಕಲ್ಲಹಳ್ಳಿ(ಬೇ), ಭೀಮಸಾಗರ, ಬ್ಯಾಟರಾಯನಪಾಳ್ಯ, ಚೆಲ್ಲಾಳು, ಕೆ ಬೇವಿನಹಳ್ಳಿ, ಶ್ರೀನಿವಾಸಪುರ (ಬೇ) ಮಾಯಗೊಂಡನಹಳ್ಳಿ (ಬೇ), ಕಂತೇವಡೇರಹಳ್ಳಿ, ಯಲಚಗೆರೆ ಮಜರೆ ಗೋಪೇನಹಳ್ಳಿ, ವಮಚೀಹಳ್ಳಿ, ಮಿಟ್ರಹಳ್ಳಿ, ಹನುಮಂತಗಿರಿ, ಆಶ್ರಯಕಾಲೋನಿ,(ಬೇ) ಗದ್ದೇನಹಳ್ಳಿ,ಗೊಲ್ಲಚಿನ್ನಹಳ್ಳಿ(ಮ), ಚಿನ್ನಹಳ್ಳಿ, ಬೂಚನಹಳ್ಳಿ, ಹರಿಜನಕಾಲೋನಿ(ಮ), ಸುಂಕದಹಳ್ಳಿ, ಬೈರಗೊಂಡ್ಲು, ಗೊಲ್ಲರಹಟ್ಟಿ(ಮ), ಲಕ್ಕಮುತ್ತನಹಳ್ಳಿ, ಬೆಲ್ಲದಹಳ್ಳಿ, ಕಾಲುವೇಹಳ್ಳಿ, ಯಲಮಾರನಹಳ್ಳಿ, ಓಬನಾಯಕನಪಾಳ್ಯ, ವಡೇರಹಳ್ಳಿ,ವಡ್ಡರಹಟ್ಟಿ(ಮ). |

**ವಿಶೇಷ ಸೂಚನೆ:-**

**ತುಮಕೂರು ಜಿಲ್ಲೆಯ ಕೊರಟಗೆರೆ ತಾಲ್ಲೂಕಿನ ತಾಲ್ಲೂಕು ಪಂಚಾಯಿತಿ ಕ್ಷೇತ್ರಗಳ ಚುನಾಯಿತ ಸದಸ್ಯರ ಸಂಖ್ಯೆ ಮತ್ತು ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಸೀಮಾ/ಗಡಿ ನಿರ್ಣಯ ಕುರಿತಂತೆ, ದಿನಾಂಕ:23-01-2026ರ ಒಳಗಾಗಿ ಸಲ್ಲಿಸಲ್ಪಟ್ಟ ಆಕ್ಷೇಪಣೆ/ಅಹವಾಲುಗಳ ಪರಿಶೀಲನಾ ಅದಾಲತ್ ಅನ್ನು ದಿನಾಂಕ:27-01-2026 ರಂದು ಬೆಳಿಗ್ಗೆ10:30 ರಿಂದ ಮಧ್ಯಾಹ್ನ 1:30 ರವರೆಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಗೇಟ್-ನಂ-2, 2ನೇ ಮಹಡಿ, ಕೊಠಡಿ ಸಂಖ್ಯೆ:229, 230 ಬಹುಮಹಡಿಗಳ ಕಟ್ಟಡ, ಬೆಂಗಳೂರು-560001 ಇಲ್ಲಿ ನಡೆಸಲಾಗುವುದು. ಆಕ್ಷೇಪಣೆ ಮತು ಅಹವಾಲುಗಳನ್ನು ಸಲ್ಲಿಸಿರುವವರು ಅದಾಲತ್ ನಲ್ಲಿ ಭಾಗವಹಿಸಲು ಇಚ್ಚಿಸಿದಲ್ಲಿ, ಸರ್ಕಾರದಿಂದ ನೀಡಿರುವ ಭಾವಚಿತ್ರವುಳ್ಳ ಗುರುತಿನ ಚೀಟಿಯ ಮೂಲ ಪ್ರತಿಯನ್ನು ತಮ್ಮೊಂದಿಗೆ ಕಡ್ಡಾಯವಾಗಿ ತರತಕ್ಕದ್ದು.**

**(ಡಾ||ಎನ್. ನೋಮೇಶ್ ಕುಮಾರ್)**
ನಿರ್ದೇಶಕರು (ಪಂ. ರಾಜ್) ಮತ್ತು
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಹಾಗೂ ಸದಸ್ಯ ಕಾರ್ಯದರ್ಶಿ
ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗ

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH